ರಾಯಚೂರು ಜಿಲ್ಲೆಯಲ್ಲಿರುವ ಮಿತವೇತನ ಪದವೀಧರರು

1290 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಯಚೂರು ಜಿಲ್ಲೆಯಲ್ಲಿರುವ ಸ್ಟೈಫಂಡರಿ ಪದವೀಧರ ನೌಕರರ ಸಂಖ್ಯೆ ಎಷ್ಟು?*

ಆ) *ರಾಯಚೂರು ಜಿಲ್ಲೆಯಲ್ಲಿರುವ ಸ್ಟೈಫಂಡರಿ ಪದವೀಧರರನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ?*

ಇ) *ಹಾಗಿದ್ದಲ್ಲಿ 1989ರಿಂದ ಇಲ್ಲಿಯವರೆಗೆ ಎಷ್ಟು ಜನರನ್ನು ಖಾಯಂಗೊಳಿಸಲಾಗಿದೆ?*

ಈ) *ಇಲ್ಲದಿದ್ದರೆ ಯಾವಾಗ ಖಾಯಂಗೊಳಿಸಲಾಗುವುದು?*

ಶ್ರೀ ಸಿ. ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) :

ಅ) 250

ಆ) ಹೌದು

ಇ) 1303

ಈ) ಖಾಯಂಗೊಳಿಸುವ ಸಲುವಾಗಿ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಖಾಲಿ ಹುದ್ದೆಗಳನ್ನು ಕಳುಹಿಸಲು ಕೋರಲಾಗಿದೆ.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆಯಲ್ಲಿ ಸ್ಟೈಫಂಡರಿ ಪದವೀಧರರ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ, ಉತ್ತರದಲ್ಲಿ 1303 ಸ್ಟೈಫಂಡರಿ ಪದವೀಧರರು ಇದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಇವರನ್ನು ಬೇಗ ಖಾಯಂಗೊಳಿಸಬೇಕೆಂದು ಹಲವಾರು ಸಲ ಸದಸ್ಯರು ಕೇಳಿದ್ದಾರೆ. ಇನ್ನು ಎಷ್ಟು ದಿವಸಗಳಲ್ಲಿ ಸ್ಟೈಫಂಡರಿ ಪದವೀಧರರನ್ನು ಖಾಯಂಗೊಳಿಸುತ್ತೀರೆಂಬುದನ್ನು ನಿರ್ದಿಷ್ಟವಾಗಿ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಯುವಕರಿದ್ದಾರೆ, ಆದಷ್ಟು ತೀವ್ರಗತಿಯಲ್ಲಿ ಯುವಕರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಎಲ್ಲಾ ಇಲಾಖೆಗಳಿಗೆ ಮಾಹಿತಿಯನ್ನು ಕೇಳಿದ್ದೇವೆ. ಅವರು ಎಲ್ಲಾ ಮಾಹಿತಿಯನ್ನು ನಮಗೆ ಕಳುಹಿಸಿಕೊಡುವುದಕ್ಕೆ ನಾಳೆಯೇ ಕೊನೆಯ ದಿನಾಂಕವಾಗಿದೆ. ಅವರು ಕಳುಹಿಸಿಕೊಟ್ಟ ಮೇಲೆ ಖಾಲಿ ಇರುವ ಸ್ಥಳಗಳಿಗೆ ಶೀಘ್ರದಲ್ಲಿಯೇ ಅವರನ್ನು ಭರ್ತಿ ಮಾಡಲಾಗುವುದೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಬೆಳೆಗಳ ನಾಶ

1235 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ಅತೀ ವೃಷ್ಟಿಯಿಂದ ಖಾರೀಫ್ ಬೆಳೆಗಳು ಹಾಗೂ ರಾಬಿ ಬೆಳೆಗಳು ನಾಶವಾಗಿ ಅದರಲ್ಲಿ ಮುಖ್ಯ ಬೆಳೆಯಾದ ತೊಗರೀ ಬೆಳೆ ಒಣಗಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಆದಾಗ್ಯೂ ಉಳಿದ ಬೆಳೆಗಳಿಗಾಗಿ ಕ್ರಿಮಿನಾಶಕ, ಇತ್ಯಾದಿ ಔಷಧಿಗಳನ್ನು ಸಿಂಪಡಿಸಿದರೆ ಅವುಗಳು ಪೂರ್ತಿ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಬಂದಿದೆ.

ಆ) ಶೇಕಡ 15ರಿಂದ 20 ರವರೆಗೆ ತೊಗರೀ ಬೆಳೆಯು ಕ್ರಿಮಿನಾಶಕ ಔಷಧಿಗಳು ಸಿಂಪಡಿಸಿದ್ದರಿಂದ ತೊಗರೀ ಬೆಳೆ ಹಾನಿಯಾಗಿರುವುದೆಂದು ವರದಿಯಾಗಿದೆ. ಕ್ರಿಮಿ ಕೀಟಕ್ಕೆ ಒಳಗಾಗಿದ್ದ ತೊಗರೀ ಬೆಳೆಯನ್ನು ಆರು ಏಳು ಸಾರಿ ಕ್ರಿಮಿ ನಾಶಕ ಔಷಧಿಯನ್ನು ಸಿಂಪಡಿಸುವ ಮೂಲಕ ಕಾಪಾಡಲಾಗಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೇ ನಾನು ಕೇಳಿರುವ ಪ್ರಶ್ನೆಗೆ ಸರ್ಕಾರದವರು ಕೊಟ್ಟಿರುವ ಉತ್ತರ ಅರ್ಥವಾಗುತ್ತಿಲ್ಲ. ಗುಲ್ಬರ್ಗಾ ಜಿಲ್ಲೆಯಲ್ಲಿ ಅತೀ ವೃಷ್ಟಿಯಿಂದ ಖಾರೀಫ್ ಬೆಳೆಗಳು ಹಾಗೂ ರಾಬಿ ಬೆಳೆಗಳು ನಾಶವಾಗಿವೆ. ಅದರಲ್ಲಿ ಮುಖ್ಯ ಬೆಳೆಯಾದ ತೊಗರೀ ಬೆಳೆ ಒಣಗಿ ಹೋದರೆ ಉಳಿದ ಬೆಳೆಗಳಿಗಾಗಿ ಕ್ರಿಮಿನಾಶಕ ಇತ್ಯಾದಿ ಔಷಧಿಗಳನ್ನು ಸಿಂಪಡಿಸಿದರೆ ಅವುಗಳು ಪೂರ್ತಿ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿರುತ್ತೇನೆ. ಅದರಲ್ಲಿ ಎರಡು ಪ್ರಶ್ನೆಗಳನ್ನು ಮಾಡಿ ಒಂದಕ್ಕೆ ಬಂದಿದೆಯೆಂದು ತಿಳಿಸಿದ್ದಾರೆ. ಎರಡನೆಯ ಉತ್ತರದಲ್ಲಿ ಶೇಕಡ 15ರಿಂದ 20 ರವರೆಗೆ ತೊಗರೀ ಬೆಳೆಯು ಕ್ರಿಮಿನಾಶಕ ಔಷಧಿಗಳು ಸಿಂಪಡಿಸಿದ್ದರಿಂದ ತೊಗರೀ ಬೆಳೆ ಹಾನಿಯಾಗಿರುವುದೆಂದು ವರದಿಯಾಗಿದೆ. ಕ್ರಿಮಿಕೀಟಕ್ಕೆ ಒಳಗಾಗಿದ್ದ ತೊಗರೀ ಬೆಳೆಯನ್ನು ಆರು - ಏಳು ಸಾರಿ ಕ್ರಿಮಿ ನಾಶಕ ಔಷಧಿಯನ್ನು ಸಿಂಪಡಿಸುವ ಮೂಲಕ ಕಾಪಾಡಲಾಗಿದೆ" ಎಂದು ಹೇಳಿದ್ದಾರೆ. ಒಂದು ಕಡೆ ತೊಗರೀ ಬೆಳೆ ಹಾನಿಯಾಗಿರುವ ಬಗ್ಗೆ ವರದಿಯಾಗಿದೆ ಎಂದು ತಿಳಿಸಿದ್ದಾರೆ. ಇನ್ನೊಂದು ಕಡೆ ಕ್ರಿಮಿಕೀಟಕ್ಕೆ ಒಳಗಾಗಿದ್ದ ತೊಗರೀ ಬೆಳೆಯನ್ನು ಆರು - ಏಳು ಸಾರಿ ಕ್ರಿಮಿನಾಶಕ ಔಷಧಿಯನ್ನು ಸಿಂಪಡಿಸುವ ಮೂಲಕ ಕಾಪಾಡಲಾಗಿದೆ ಎಂದು ತಿಳಿಸಿದ್ದಾರೆ. ಇದರಲ್ಲಿ ನಿಜ ಯಾವುದು ಸ್ವಾಮಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಅಗ್ರಿಕಲ್ಚರ್ ಮಿನಿಸ್ಟರ್ ರವರಿಗೆ ವರ್ಗಾಯಿಸಲಾಗಿದೆ.

ಅಧ್ಯಕ್ಷರು : ಹಾನಿಗೊಳಗಾಗಿರುವುದನ್ನು ಕಾಪಾಡಲಾಗಿದೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಪ್ರಶ್ನೆಯನ್ನು ಅಗ್ರಿಕಲ್ಚರ್ ಮಿನಿಸ್ಟರ್ ರವರಿಗೆ ಟ್ರಾನ್ಸ್‌ಫರ್ ಮಾಡಬೇಕು. ಇದು ಅವರಿಗೆ ಸಂಬಂಧಪಟ್ಟಿದ್ದುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆಯಲ್ಲಿ 'ಅ' ಎಂಬ ಪ್ರಶ್ನೆ ಮತ್ತು 'ಇ' ಎಂಬ ಪ್ರಶ್ನೆ ಅಚ್ಚಾಗಿಲ್ಲ.

ಅಧ್ಯಕ್ಷರು : ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಆದ್ದರಿಂದ ನಿಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ನನ್ನ ಪೂರ್ತಿ ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ಅಗ್ರಿಕಲ್ಚರ್ ಮಿನಿಸ್ಟರ್ ರವರು ಸರಿಯಾದ ಉತ್ತರವನ್ನು ತಮಗೆ ಒದಗಿಸುತ್ತಾರೆಂದು ಹೇಳುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೇ, ಚುಕ್ಕೆ ಪ್ರಶ್ನೆ 177(1303) ನಮ್ಮ ಇಲಾಖೆಗೆ ಸಂಬಂಧಪಟ್ಟದ್ದಲ್ಲ. ಇದನ್ನು ಡಿ.ಪಿ.ಎ.ಆರ್.ಗೆ ಕಳುಹಿಸಿಕೊಡಲಾಗಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ ತಾವು ಹೇಳಿದ ಹಾಗೆ, ಇದು ಅನಾನುಕೂಲಕರವಾದ ಪ್ರಶ್ನೆ. ಈ ಪ್ರಶ್ನೆಗೆ ಸರ್ಕಾರಕ್ಕೆ ಹೌದು ಎನ್ನುವುದಕ್ಕೂ ಧೈರ್ಯ ಇಲ್ಲ, ಇಲ್ಲ ಎನ್ನುವುದಕ್ಕೂ ಧೈರ್ಯ ಇಲ್ಲ.

ಶ್ರೀ ಎ.ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆಯನ್ನು ಬೇರೆ ಇಲಾಖೆಗೆ ಟ್ರಾನ್ಸ್‌ಫರ್ ಮಾಡಿದೆ. Whether there is any proposal in the Government to frame and assure employement law in the state. ಎಂದು ಪ್ರಶ್ನೆ ಕೇಳಿದ್ದಾರೆ. ಇದುವರೆಗೂ ಇದು ಯಾವ ಸರ್ಕಾರದಲ್ಲೂ ಇಲ್ಲ. ಇಷರ ಬಗ್ಗೆ ನಮ್ಮ ಇಲಾಖೆ ತೀರ್ಮಾನ ತೆಗೆದುಕೊಳ್ಳುವಂಥಾದ್ದಲ್ಲ. This has to go to the planning and D.P.A.R. department in my personal opinion. ಚೀಫ್ ಮಿನಿಸ್ಟರ್ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕು. ಯಾವ ಸರ್ಕಾರ ಕೂಡ ಇದರ ಬಗ್ಗೆ ಲಾ ಮಾಡಲಿಕ್ಕೆ ಸಾಧ್ಯವಿಲ್ಲ.

ಪ್ರೊ. ಎಂ.ಡಿ.ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ಉದ್ಯೋಗಕ್ಕೆ ಹೊಸಬರಾಗಿದ್ದಾರೆ. ಯಾವ ಸರ್ಕಾರವೂ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಮಾತನಾಡುತ್ತಿದ್ದಾರೆ. ನನ್ನ ಕೈಯಲ್ಲಿರುವುದು ಮಹಾರಾಷ್ಟ್ರ ಎಂಪ್ಲಾಯಿಮೆಂಟ್ ಗ್ಯಾರಂಟಿ ಆಕ್ಟ್. ಇದು 1977ನೇ ಇಸವಿಯಲ್ಲಿ ಆಗಿರುವುದು. ನಾವು ಎಷ್ಟು ವರ್ಷ ಹಿಂದೆ ಬಿದ್ದಿದ್ದೇವೆ, ಮಾಡುವುದಕ್ಕೆ ಆಗುವುದಿಲ್ಲವೆಂತಲೂ, ಮನಸ್ಸಿಲ್ಲವೆಂತಲೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರಿಗೂ ಗೊತ್ತಿದೆ, ಎನ್.ಆರ್.ಇ.ಪಿ. ತೆಗೆದು ಆಮೇಲೆ ಜವಾಹರ್ ರೋಜ್ ಗಾರ್ ಯೋಜನೆ ಪ್ರಾರಂಭವಾದದ್ದು. ಎಂಪ್ಲಾಯಿಮೆಂಟ್ ಗ್ಯಾರಂಟಿ ಸ್ಕೀಂ ಬೇಸ್ಡ್ ಆನ್ ಮಹಾರಾಷ್ಟ್ರ ಗವರ್ನ್‌ಮೆಂಟ್ ವಸಂತರಾವ್ ಅವರು ಇದ್ದಾಗ ಏನು ಪ್ರಾರಂಭ ಮಾಡಿದರು, ಅದನ್ನು ನಾವು ಇಲ್ಲಿಯೂ ಅಡಾಪ್ಟ್ ಮಾಡಿದ್ದೇವೆ. ನಮ್ಮದನ್ನು ನೋಡಿ ಕೇಂದ್ರ ಸರ್ಕಾರದಲ್ಲಿ ಒಂದು ಸಮಗ್ರವಾದ ಯೋಜನೆಯನ್ನು ತರಬೇಕೆಂದು ರೂರಲ್ ಎಂಪ್ಲಾಯಿಮೆಂಟ್ ಸ್ಕೀಂ ಜಾರಿಯಲ್ಲಿ ಬಂತು. ಆದರೆ ಹಣದ ಕೊರತೆ ಇದ್ದ ಕಾರಣ ಎಲ್ಲಾ ಕಡೆ ಏಕಕಾಲದಲ್ಲಿ ಎಲ್ಲಾ ಅಗ್ರಿಕಲ್ಚರಲ್ ಲೇಬರರ್ಸ್ ಅನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಲೀಸ್ ಪೀರಿಯಡ್ ನಲ್ಲಿ ಮಾತ್ರ ಕೊಡಬೇಕೆಂದು ಕೆಲವು ಯೋಜನೆಗಳನ್ನು ಅಪ್ರೂವ್ ಮಾಡಿದ್ದಾರೆ. ಮಹಾರಾಷ್ಟ್ರದಲ್ಲೂ ಕೂಡ ಮಾಡಿದ್ದಾರೆ. ಮತ್ತು ಬೇರೆ ಕಡೆ ಕೂಡ ಆಗುತ್ತಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಇದರ ಆಧಾರದ ಮೇಲೆ ಇವರು ಬರಗಾಲ ಕಾಮಗಾರಿ ಮತ್ತು ರೋಜ್ ಗಾರ್ ಯೋಜನೆಯನ್ನು ಮಾಡುತ್ತೀವೆಂದು ಹೇಳುತ್ತಿದ್ದಾರೆ. ಅದು ಯಾವ ರೀತಿ ಆಗುತ್ತಿದೆ ಎಂದು ನೋಡಿದ್ದೇವೆ. ಕಾನೂನು ಚೌಕಟ್ಟಿನೊಳಗೆ ಬಾರದೆ ಇರುವುದರಿಂದ ಹಣದ ದುರುಪಯೋಗವಾಗುತ್ತಿರುವುದು. ಯಾರನ್ನು ಫಲಾನುಭವಿ ಎನ್ನುತ್ತೇವೆ ಅವನ ಕೈಗೆ ಹಕ್ಕು ಕೊಡದಿದ್ದರೆ ಭ್ರಷ್ಟಾಚಾರಕ್ಕೆ ತಾವು ಒಂದು ಬಾಗಿಲನ್ನು ತೆಗೆದುಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಆದಷ್ಟು ಬೇಗ ಸರ್ಕಾರ ಪರಿಶೀಲನೆ ಮಾಡಿ ಬೇಗ ಉದ್ಯೋಗ ಭರವಸೆ ಕಾನೂನನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಜನರಿಗೆ ಟೇಬಲ್, ಖುರ್ಚಿ, ಸರ್ಕಾರಿ ಕೆಲಸ ಬೇಕು. ಹೀಗಾಗಿ ಉದ್ಯೋಗ ಸಿಗಲಾರದ ಪರಿಸ್ಥಿತಿಯಾಗಿದೆ. ಹಳ್ಳಿಯಲ್ಲಿ ಒಬ್ಬ ಕಮ್ಮಾರ ಸಿಗುವುದಿಲ್ಲ, ಒಬ್ಬ ಮಡಿವಾಳ ಸಿಗುವುದಿಲ್ಲ. ಎಲ್ಲರಿಗೂ ನೌಕರಿ ಬೇಕು, ಖುರ್ಚಿ ಟೇಬಲ್ ಬೇಕು, ಸರ್ಕಾರಿ ಸೇವೆಯೇ ಆಗಬೇಕು. ಹೀಗಿರುವಾಗ ಎಂಪ್ಲಾಯಿಮೆಂಟ್ ಗ್ಯಾರಂಟಿ ಸ್ಕೀಂನ್ನು ಹೇಗೆ ಕೊಡುತ್ತೀರಿ? ಉದ್ಯೋಗದಲ್ಲಿ ಹೆಚ್ಚಿಗೆ ಜನ ಇದ್ದವರನ್ನು ಹೊರಗೆ ಹಾಕಿ ಎಂದು ನೀವೆ ಹೇಳುತ್ತೀರಿ. ಆದುದರಿಂದ ನಮ್ಮ ದೇಶದಲ್ಲಿ ಸೆಲ್ಫ್ ಎಂಪ್ಲಾಯಿಮೆಂಟ್ ಸ್ಕೀಂಗಳು ಆಗಬೇಕು. ಎಜುಕೇಷನ್ ಸಿಸ್ಟಂ ಚೇಂಜ್ ಆಗಬೇಕು. ಅದು ಆಗುವವರೆಗೆ ಇದು ಕಂಟಿನ್ಯೂ ಆಗುವುದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ ಈ ಮಹಾರಾಷ್ಟ್ರ ಎಂಪ್ಲಾಯಿಮೆಂಟ್ ಗ್ಯಾರಂಟಿ ಆಕ್ಟಿನ ಪ್ರತಿಯನ್ನು ತಮ್ಮ ಕಡೆ ಕಳುಹಿಸಿ ಕೊಡುತ್ತೇನೆ.

MR SPEAKER : The irony of the situation is that, this question has not been answered. I will direct the government ಇದು ಯಾರಿಗೆ ಸಂಬಂಧಪಡುತ್ತದೆ they should be able to furnish the answer at least .....

ಶ್ರೀ ವಾಟಾಳ್ ನಾಗರಾಜ್ : ಸಂಬಂಧಪಡದ 3ಜನ ಮಂತ್ರಿಗಳು ಉತ್ತರಿಸಿದರು. ಮುಖ್ಯ ಮಂತ್ರಿಗಳು ಬಂದಿದ್ದಾರೆ. ನಿಮ್ಮಮ ಉತ್ತರ ಬಂದರೆ 4 ಜನರಿಂದ ಮುಕ್ತಾಯವಾಗಬಹುದು.

ಪ್ರೊ.ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಹಕಾರಿ ಮಂತ್ರಿಗಳು ಎತ್ತಿದ ಪ್ರಶ್ನೆಗೆ ನಾನು ಉತ್ತರ ಕೊಡುತ್ತಿದ್ದೇನೆ. ಈ ಎಂಪ್ಲಾಯಿಮೆಂಟ್ ಆಕ್ಟಿನಲ್ಲಿ ಪ್ರೊಡಕ್ಟೀವ್ ಎಂಪ್ಲಾಯಿಮೆಂಟ್ ಇದೆ. ಇದನ್ನೇ ತಾವು ರೂಪಿಸಬಹುದು. ಅದಕ್ಕೆ ಅವಕಾಶ ಇದೆ. ಮಾಡಬೇಕು.

ಮಿಲ್ಲರ್ ಕೆರೆ ಅಂಗಳದ ಗುಡಿಸಲು ವಾಸಿಗಳ ಪುನರ್ವಸತಿ.

1244 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಿಲ್ಲರ್ ಕೆರೆ ಅಂಗಳದ ಮಳೆ ನೀರಿನ ದೊಡ್ಡ ಚರಂಡಿಯ ಪಕ್ಕದಲ್ಲಿ ಸ್ಥಳಾಂತರಿಸಿದ 62 ಗುಡಿಸಲು ವಾಸಿಗಳು ಇರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಆ) ಭಾರತ ಸರ್ಕಾರದ ಹಿಂದಿನ ವಸತಿ ಮತ್ತು ನಗರಾಭಿವೃದ್ಧಿ ಸಚಿವರು. ಅವರುಗಳಿಗೆ ಪುನರ್ ವಸತಿ ಕಲ್ಪಿಸುವುದಾಗಿ ಆಶ್ವಾಸನೆ ನೀಡಿದ್ದು, ಅವರುಗಳಿಗೆ ಪುನರ್ ವಸತಿ ಕಲ್ಪಿಸಲು ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಲಾಗಿದೆಯೇ?

ಇ) ಈವರೆಗೆ ಅವರುಗಳಿಗೆ ಪುನರ್ ವಸತಿ ಕಲ್ಪಿಸಲು ಕ್ರಮ ತೆಗೆದುಕೊಳ್ಳದಿರುವುದು ಸಹ ನಿಜವಲ್ಲವೇ?

ಈ) ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ನಿರ್ದೇಶನದ ಮೇರೆಗೆ ಅವರುಗಳನ್ನು ಆ ಪ್ರದೇಶದಿಂದ ಕರುಣೆಯಿಲ್ಲದೆ ಹೊರ ಹಾಕಲು ನಗರ ಪಾಲಿಕೆಯು ಪ್ರಯತ್ನಿಸುತ್ತಿರುವುದು ನಿಜವೇ?

ಉ) ಕೊಳಚೆ ನಿರ್ಮೂಲನ ಯೋಜನೆಯಡಿ ಅಥವಾ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸ್ಥಳಾಂತರಿಸಿದ ವ್ಯಕ್ತಿಗಳ ಪುನರ್ವಸತಿ ಯೋಜನೆಯಡಿ ಈ ಗುಡಿಸಲು ನಿವಾಸಿಗಳಿಗೆ ತಕ್ಷಣವೇ ಪುನರ್ವಸತಿ ಕಲ್ಪಿಸಲು ನಗರ ಪಾಲಿಕೆಯ ಅಧಿಕಾರಿಗಳಿಗೆ ಸರ್ಕಾರವು ನಿರ್ದೇಶನವನ್ನು ನೀಡುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) 72 ಗುಡಿಸಲು ನಿವಾಸಿಗಳಿದ್ದಾರೆ.

ಆ) ಹೌದು

ಇ) ಈ ಗುಡಿಸಲು ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಇಲ್ಲ

ಉ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.